# ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.
# ನ್ಯಾಯಾಲಯ, ಹೊಸನಗರ
## ಸಿ.ಸಿ. ನಂ. 498/2025

**ಚಾಸಾ–8 ಪ್ರಾಸಾ–6**

| | | |
|---|---|---|
| ಹೆಸರು | – | ಪ್ರಿಯಾ ದೊಡ್ಡೇಗೌಡ |
| ಗಂಡನ ಹೆಸರು | – | ಮಧು |
| ವಯಸ್ಸು | – | 37 ವರ್ಷ |
| ವೃತ್ತಿ | – | ಭೂ ವಿಜ್ಞಾನಿ |
| ವಾಸಸ್ಥಳ | – | ಶಿವಮೊಗ್ಗ. |

(ದಿನಾಂಕಃ **04.06.2026** ರಂದು ಸಾಕ್ಷಿಗೆ ಕ್ರಮಬದ್ಧವಾಗಿ ಪ್ರಮಾಣ ವಚನವನ್ನು ಬೋಧಿಸಲಾಯಿತು)

**ಮುಖ್ಯ ವಿಚಾರಣೆ ಃ ಸಹಾಯಕ ಸರ್ಕಾರಿ ಅಭಿಯೋಜಕ ರವರಿಂದ ಃ**

1. ನಾನು 2023 ರಿಂದ ಇಲ್ಲಿಯವರೆಗೆ ಶಿವಮೊಗ್ಗದ ಗಣಿ ಮತ್ತು ಭೂ ವಿಜ್ಞಾನ ಇಲಾಖೆಯಲ್ಲಿ ಭೂ ವಿಜ್ಞಾನಿಯಾಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ.

2. ದಿನಾಂಕಃ 03.12.2024 ರಂದು ಹೊಸನಗರ ಪೊಲೀಸ್ ಠಾಣೆಯಿಂದ ಒಂದು ನಿವೇದನೆ ಬಂದಿರುತ್ತದೆ. ನಾನು ಅದನ್ನು ಸ್ವಿಕರಿಸಿಕೊಂಡು ಪರಿಶೀಲಿಸಿದಾಗ ದಿನಾಂಕಃ 29.10.2024 ರಂದು ರಾತ್ರಿ ಸುಮಾರು 8 ಗಂಟೆ ಸಮಯದಲ್ಲಿ ಕರಿನಗೊಳ್ಳಿ ಗ್ರಾಮದಲ್ಲಿ ಗಸ್ತಿನಲ್ಲಿರುವಾಗ ಪರವಾನಿಗೆ ಇಲ್ಲದೇ ವಾಹನ ಸಿಕ್ಕಿರುತ್ತದೆ. ಅದರ ವಾಹನ ಸಂಖ್ಯೆ ಕೆ.ಎ 29 9831 ವಾಹನವು ಅಕ್ರಮವಾಗಿ ಮರಳು ಸಾಗಾಣಿಕೆ ಮಾಡುತ್ತಿರುವುದರಿಂದ ಸದರಿ ವಾಹನದ ಮೇಲೆ ನಾವು ಮೊಖದಮ್ಮೆ ದಾಖಲಿಸಿದ್ದು ಸದರಿ ಪ್ರದೇಶಕ್ಕೆ ತಮ್ಮ ಕಚೇರಿಯಿಂದ ಪರವಾನಿಗೆ ಕೊಟ್ಟಿದ್ದರ ಬಗ್ಗೆ ವರದಿ ನೀಡುವಂತೆ ನಿವೇದನೆಯನ್ನು ಸಲ್ಲಿಸಿರುತ್ತಾರೆ.

3. ಸದರಿ ನಿವೇದನೆಯನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಸದರಿಯನ್ನು ನಿಪಿ11 ಎಂದು ಗುರುತಿಸಲಾಯಿತು.

4. ದಿನಾಂಕಃ 19.12.2024 ರಂದು ಹೊಸನಗರ ತಾಲ್ಲೂಕು ಮುಂಬಾರು ಗ್ರಾಮದ ಮುಂಬಾರು ಹೊಳೆ ಪ್ರದೇಶದಲ್ಲಿ ಮರಳು ತೆಗೆಯಲು ಯಾವುದೇ ಪರವಾನಿಗೆಯನ್ನು ಕೊಟ್ಟಿರುವುದಿಲ್ಲ ಎಂದು ನನ್ನ ವರದಿಯನ್ನು ಪೊಲೀಸ್ ಎಸ್.ಐ ಹೊಸನಗರ ರವರಿಗೆ ಕಳುಹಿಸಿರುತ್ತೇನೆ. ಸದರಿ ವರದಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಸದರಿಯನ್ನು ನಿಪಿ12 ಎಂದು, ಅದರಲ್ಲಿನ ತನ್ನ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಸದರಿ ಸಾಕ್ಷಿ ಸಹಿಯನ್ನು ನಿಪಿ12(ಎ) ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ ಆರೋಪಿಗಳ ಪರ ವಕೀಲರಾದ ಶ್ರೀ ವೈ.ಪಿ.ಎಂ ರವರಿಂದಃ**

1. ನಾನು ನನ್ನ ವರದಿಯೊಂದಿಗೆ ಸಂಬಂಧಪಟ್ಟ ಸೂಕ್ತವಾದ ದಾಖಲೆಯನ್ನು ಕೊಟ್ಟಿರುವುದಿಲ್ಲ ಎಂದರೆ ಸರಿ. ಸಾಕ್ಷಿಯು ಮುಂದುವರಿದು ಅಲ್ಲಿ ಪರವಾನಿಗೆ ಕೊಟ್ಟಿಲ್ಲದೇ ಇರುವುದರಿಂದ ದಾಖಲೆ ಇರುವುದಿಲ್ಲ ಎಂದು ನುಡಿಯುತ್ತಾರೆ. ನಾನು ಪೊಲಿಸರ ಕೋರಿಕೆ ಮೇರೆಗೆ ಸುಳ್ಳು ವರದಿಯನ್ನು ಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ. ಆರೋಪಿಗಳು ತಮ್ಮ ಲಾರಿಯಲ್ಲಿ ಅಕ್ರಮವಾಗಿ ಮರಳು ಸಾಗಾಣಿಕೆ ಮಾಡುತ್ತಿರಲಿಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇರುವುದಿಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು).

ಓ. ಹೇ. ಕೇ. ಸ. ಎಂ. ಒ.

ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,
ಹೊಸನಗರ.